ಸಂತೋಷವಾಗುತ್ತದೆ. ಅಸಂತೋಷದಿಂದ ಪಾರಾಗುವ ತಂತ್ರ ಮಾರ್ಗ ಇದರಲ್ಲಿದೆ.

ನಿರಂತರ ಸುಖ ಪಡೆಯುವುದೇ ಬದುಕಿನ ಮೂಲ ಉದ್ದೇಶ. ಇದನ್ನು ಪಡೆಯುವ ರೀತಿ-ನೀತಿಗಳ ವಿವರಣೆ ಗೀತೆಯಲ್ಲಿದೆ. ಸುಖ ವೆಂಬುದು ತನ್ನಲ್ಲಿಯೇ ಇದೆ ಎಂಬ ಅಂಶವನ್ನು ವೈಜ್ಞಾನಿಕವಾಗಿ ಮನವರಿಕೆ ಮಾಡಿಕೊಟ್ಟಿರುವ ರೀತಿ ಮನೋಜ್ಞವಾಗಿದೆ. ಬಾಹ್ಯ ಪ್ರಾಪಂಚಿಕ ಆಸೆಗಳಿಂದ ಮನಸ್ಸನ್ನು ಕಳಚಿ ಅವನಲ್ಲೇ ಇರುವ ಅಂತರಂಗದ ದೀಪವನ್ನು ಪ್ರಕಾಶಿಸಿಕೊಂಡು ನಿರಂತರವಾಗಿ ಸುಖ ವಾಗಿರುವ ರೀತಿಯ ಬೋಧನೆ ಗೀತೆಯಲ್ಲಿದೆ. ಉದಾಹರಣೆಗೆ:

**ಯೋಽಂತಃಸುಖೋಽಂತರಾರಾಮಸ್ತಥಾಂತಜ್ಯೋರ್ತಿರೇವ ಯಃ।**
**ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ॥** (೫-೨೪)

(‘ಯಾವಾತ ತನ್ನೊಳಗಿರುವ ಆತ್ಮನಲ್ಲಿಯೇ ಸುಖ ಪಡುವನೋ, ಆತ್ಮನಲ್ಲಿಯೇ ಕ್ರೀಡಿಸುವನೊ, ಅಂತರಾತ್ಮವೇ ಯಾರಿಗೆ ಪ್ರಕಾಶವಾಗಿರುವುದೋ, ಆ ಯೋಗಿಯು ಬ್ರಹ್ಮಸ್ವರೂಪಿಯೇ ಆಗಿ, ಬ್ರಹ್ಮದಲ್ಲಿ (ಅತೀತಶಕ್ತಿಯಲ್ಲಿ) ಲೀನವಾಗುವನು.’)

ರಾಜಯೋಗ, ಭಕ್ತಿಯೋಗಗಳಿಂದ ಅತೀತಶಕ್ತಿಯನ್ನು ಗಳಿಕೆ ಮಾಡಿಕೊಂಡು ನಿರಂತರ ಸುಖಾನುಭವವನ್ನು ಹೊಂದುವ ವಿಧಿ-ವಿಧಾನಗಳು ಗೀತೆಯಲ್ಲಿವೆ.

ವಿಶ್ವರೂಪಿ ಸೃಷ್ಟಿಯಲ್ಲಿರುವವುಗಳೆಲ್ಲಾ ಮನುಷ್ಯನಲ್ಲಿವೆ. ಅವನಲ್ಲಿರುವವುಗಳೆಲ್ಲಾ ಸೃಷ್ಟಿಯಲ್ಲಿವೆ. ಹೀಗಾಗಿ ಸೃಷ್ಟಿಯ ಪ್ರತಿಯೊಂದರ ಜೊತೆಗೆ ಅವನಿಗೆ ಗೋಚರ ಮತ್ತು ಅಗೋಚರವಾದ ಅವಿನಾಭಾವ ಸಂಬಂಧವಿದೆ ಎಂಬ ಜ್ಞಾನ ಗೀತೆಯಲ್ಲಿದೆ.

ಮನುಷ್ಯ ಬದುಕಿರುವಾಗ, ಬದುಕಿನ ಮತ್ತು ಸಾವಿನ ಆಚೆಯ ಲೋಕಗಳನ್ನು ಅವನಿಗೆ ಪರಿಚಯಿಸಿ, ಅವು ಅವನಿಂದ ಏನನ್ನು ನಿರೀಕ್ಷಿಸುತ್ತವೆ ಎಂಬ ಅರಿವನ್ನುಂಟುಮಾಡಿ, ಲೌಕಿಕ ಬದುಕನ್ನು ಹಸನುಗೊಳಿಸುವ ಜ್ಞಾನ ಗೀತೆಯಲ್ಲಿದೆ. ವ್ಯಾವಹಾರಿಕ ಲೋಕ ಮತ್ತು ಆಧ್ಯಾತ್ಮಿಕ ಲೋಕಗಳೆರಡರ ಜ್ಞಾನಕೋಶ ಭಗವದ್ಗೀತೆ. ವ್ಯಾವಹಾರಿಕ ಬದುಕಿನಲ್ಲಿ ತಲ್ಲೀನವಾಗಿರುವಾಗಲೇ, ಅದರಿಂದ ಬಿಡುಗಡೆಗೊಳ್ಳುವ ವಿಧಿ-ವಿಧಾನಗಳು ಗೀತೆಯಲ್ಲಿವೆ. ಗೀತೆ ಬದುಕಿನ ನೀತಿ ಸಂಹಿತೆಗಳನ್ನೊಳಗೊಂಡಿದೆ.

ಜಗತ್ತಿನಲ್ಲಿ ಯಾವುದನ್ನೂ ಹೊಸದಾಗಿ ಸೃಷ್ಟಿಸಲು ಸಾಧ್ಯವಿಲ್ಲ, ಯಾವುದನ್ನೂ ನಾಶಪಡಿಸುವುದು ಸಾಧ್ಯವಿಲ್ಲ, ಒಂದನ್ನು ಮತ್ತೊಂದನ್ನಾಗಿ ರೂಪಾಂತರಿಸಬಹುದಷ್ಟೆ ಎಂಬ ಗೀತೆಯಲ್ಲಿನ ಉಕ್ತಿ ಸಾರ್ವತ್ರಿಕ ಸತ್ಯವಾಗಿದೆ. ವಸ್ತು ಮತ್ತು ಶಕ್ತಿಗಳನ್ನೊಳಗೊಂಡ ಈ ತತ್ತ್ವ ಕ್ವಾಂಟಮ್ ಭೌತಶಾಸ್ತ್ರದಿಂದಲೂ ಅನುಮೋದಿತವಾಗಿದೆ. ಈ ಹಿನ್ನೆಲೆಯಲ್ಲಿ ಮನುಷ್ಯನ ಪುನರ್ಜನ್ಮಕ್ಕೆ ಸಂಬಂಧಿಸಿದ ವಿಚಾರಗಳೂ ಸಹ ವೈಜ್ಞಾನಿಕವಾಗಿಯೇ ಇವೆ. ಉದಾಹರಣೆಗೆ:

**ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ।**
**ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನ ಮುಹ್ಯತಿ॥** (೨.೧೩)

(‘ದೇಹಿಗೆ ಬಾಲ್ಯ, ಯೌವನ, ಮುಪ್ಪು ಮತ್ತು ಸಾವುಗಳೆಂಬ ಅವಸ್ಥೆಗಳು ಇರುವಂತೆ, ಸಾವಿನ ನಂತರ ಮತ್ತೊಂದು ದೇಹವನ್ನು ಹೊಂದುವುದೂ ಸಹಜ.ಇದನ್ನರಿತ ಧೀರನು ಈ ವಿಷಯದಲ್ಲಿ ಭ್ರಮಿತನಾಗುವುದಿಲ್ಲ.’)

ವಿಶ್ವ ಆರೋಗ್ಯ ಸಂಸ್ಥೆ ಆಧ್ಯಾತ್ಮಿಕ ಆರೋಗ್ಯವನ್ನು ಒಪ್ಪಿಕೊಂಡಿದ್ದರೂ, ಅದರ ರೂಪುರೇಷೆ ಮತ್ತು ಸ್ವರೂಪಗಳನ್ನು ಇನ್ನೂ ನಿರ್ಧರಿಸಿಲ್ಲ. ಆತ್ಮದ ಬಗ್ಗೆ ಆಧುನಿಕ ವೈದ್ಯವಿಜ್ಞಾನಕ್ಕೆ ಏನೇನೂ ಗೊತ್ತಿಲ್ಲ. ಆಧ್ಯಾತ್ಮಿಕ ಆರೋಗ್ಯಜ್ಞಾನದ ಗಣಿ ಇರುವುದು ಭಗವದ್ಗೀತೆಯಲ್ಲಿ ಎಂಬಂಶ ಆಧುನಿಕ ವಿಜ್ಞಾನಕ್ಕೂ ಇಂದು ಅರಿವಾಗತೊಡಗಿದೆ. ಭಗವದ್ಗೀತೆಯ ಪ್ರಮುಖ ಅಂಶವಾದ ‘ಯೋಗ’ ವಿಶ್ವ ವಿಖ್ಯಾತಿ ಪಡೆದಿರುವುದೇ ಇದಕ್ಕೆ ಸಾಕ್ಷಿ. ಇಡೀ ವಿಶ್ವವೇ ಆಧ್ಯಾತ್ಮಿಕ ಆರೋಗ್ಯಕ್ಕೆ ಭಾರತದತ್ತ ನೋಡುತ್ತಿದೆ.

ಪ್ರಾಪಂಚಿಕ ಮಟ್ಟದಲ್ಲಿ ಮಾನಸಿಕ ಮತ್ತು ಕ್ಯಾನ್ಸರ್ ಆಸ್ಪತ್ರೆಗಳಲ್ಲಿ ಆಧ್ಯಾತ್ಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಿ, ದುರ್ಬಲಗೊಂಡ ಮನಸ್ಸನ್ನು ಸಬಲಗೊಳಿಸುವ ಮೂಲಕ, ಆಧುನಿಕ ವೈದ್ಯವಿಜ್ಞಾನದಲ್ಲಿ ಉತ್ತರ ಕಂಡುಕೊಳ್ಳಲಾಗದ ಸಮಸ್ಯೆಗಳಿಗೆ ಆಧ್ಯಾತ್ಮಿಕ ಜ್ಞಾನದಿಂದ ಉತ್ತರಗಳನ್ನು ಪ್ರಾಪಂಚಿಕ ಮಟ್ಟದಲ್ಲಿ ಯಶಸ್ವಿಯಾಗಿ ಕಂಡುಕೊಳ್ಳಲಾಗುತ್ತಿದೆ.

ಆಧ್ಯಾತ್ಮಿಕ ಜ್ಞಾನವನ್ನು ಎಲ್ಲಾ ಶಾಲಾಕಾಲೇಜುಗಳಲ್ಲಿ ಪಠ್ಯ ವಿಷಯಗಳನ್ನಾಗಿ ಬೋಧಿಸುವಂತಾಗಬೇಕು. ಸರ್ಕಾರ ಈ ದಿಕ್ಕಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಬೇಕು. ಗೀತೆಯಲ್ಲಿರದ, ಬೈಬಲ್, ಕುರಾನ್, ಇತ್ಯಾದಿ ಇನ್ನಿತರ ಆಧ್ಯಾತ್ಮಿಕ ಗ್ರಂಥಗಳಲ್ಲಿರುವ ಆಧ್ಯಾತ್ಮಿಕ ಜ್ಞಾನವನ್ನೂ ಸಹ ಬೋಧಿಸುವಂತಾಗಬೇಕು. ಬದುಕಿಗೆ ಸಂಬಂಧಿಸಿದ ಜ್ಞಾನವಿರುವುದು ಆಧ್ಯಾತ್ಮಿಕ ಜ್ಞಾನದಲ್ಲಿ ಮಾತ್ರ. ಇಂದಿನ ಶಿಕ್ಷಣದಲ್ಲಿ ಭೌತಿಕ ವಿಚಾರಗಳಿಗೆ ಮಾತ್ರ ಹೆಚ್ಚು ಒತ್ತು ನೀಡಲಾಗುತ್ತಿದೆ. ಸೃಷ್ಟಿಯ ಸತ್ಯಸಂಗತಿಗಳನ್ನು ತಿಳಿಸಿಕೊಟ್ಟು, ಅದನ್ನು ಸುಸಂಸ್ಕೃತ ದಿಕ್ಕಿನಲ್ಲಿ ಬೆಳೆಸುವ ಜ್ಞಾನ ಇಂದಿನ ಶಿಕ್ಷಣದಲ್ಲಿಲ್ಲ. ಆಧುನಿಕ ಮಾನವ ಮಾನಸಿಕವಾಗಿ ಹೆಚ್ಚು-ಹೆಚ್ಚು ಸಂಕಷ್ಟಕ್ಕೀಡಾಗಿ ಹೊಸ ಹೊಸ ಬಗೆಯ ಕಾಯಿಲೆಗಳಿಗೆ ತುತ್ತಾಗುತ್ತಿರುವುದಕ್ಕೆ ಈ ಕೊರತೆಯೇ ಪ್ರಮುಖ ಕಾರಣ. ಸಂಕಷ್ಟಗಳ ನಿವಾರಣೆಯ ಜ್ಞಾನವಿರುವುದು ಆಧ್ಯಾತ್ಮಿಕ ಜ್ಞಾನದಲ್ಲಿ ಮಾತ್ರ. ಇಂದಿನ ಆಧುನಿಕ ಜಗತ್ತಿನ ಭಾಷೆಯಲ್ಲಿ ಹೇಳುವುದಾದರೆ ಆಧ್ಯಾತ್ಮಿಕ ಜ್ಞಾನ ಧರ್ಮಾತೀತ, ದೇಶಾತೀತ, ಜಾತ್ಯತೀತ, ವರ್ಗಾತೀತವಾಗಿದ್ದು ಮನುಕುಲದ ಉದ್ಧಾರಕ ಜ್ಞಾನವಾಗಿದೆ. ಅದು ಪ್ರಪಂಚದ ಎಲ್ಲ ಜನರನ್ನೂ ತಲುಪುವಂತಾಗಬೇಕು. ಆಗ ಮಾತ್ರ **‘ವಸುಧೈವ ಕುಟುಂಬಕಂ’** ಎಂಬ ವೈಜ್ಞಾನಿಕ ದೃಷ್ಟಿಕೋನ ವಿಶ್ವಮಾನ್ಯವಾಗಲು ಸಾಧ್ಯ. ✤

# ಕುರುಕ್ಷೇತ್ರದ ಉಗಮ


**ಸಂಗ್ರಹ:** ಸ್ವಾಮಿ ಜ್ಞಾನಸ್ವರೂಪಾನಂದ **ನಿರೂಪಣೆ:** ರೇವತಿ **ಚಿತ್ರ:** ಶಂಕರ್


ಸ್ವಾಮಿ ವಿವೇಕಾನಂದರು ಕರೆ ನೀಡಿದ ಶಕ್ತಿ, ಪೌರುಷ, ಕ್ಷಾತ್ರವೀರ್ಯ, ಬ್ರಹ್ಮತೇಜಸ್ಸುಗಳಿಗೆ ಉತ್ತಮ ನಿದರ್ಶನವಾಗಿದೆ ಈ ಕಥೆ.












**5** ರಾಜ ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದ ಋಷಿಮುನಿಗಳನ್ನು ವಿಚಾರಿಸಿದ.





**6** ಋಷಿಗಳ ಮಾರ್ಗದರ್ಶನದಂತೆ ರಾಜ ಕಠಿಣ ತಪಸ್ಸನ್ನು ಆಚರಿಸಿದ. ಆಗ ಮಹಾದೇವ ಮತ್ತು ಯಮ ಪ್ರತ್ಯಕ್ಷರಾದರು.




**7** ಕುರುರಾಜನು ಶಿವನ ವೃಷಭ ಹಾಗೂ ಯಮನ ಕೋಣ ವನ್ನು ನೊಗಕ್ಕೆ ಕಟ್ಟಿ ನೆಲವನ್ನು ಉಳತೊಡಗಿದ.




**8** ಆಕಾಶಮಾರ್ಗದಲ್ಲಿ ಪ್ರಯಾಣ ಮಾಡುತ್ತಿದ್ದ ಇಂದ್ರ ಅದನ್ನು ನೋಡಿ, ಆಶ್ಚರ್ಯಚಕಿತನಾಗಿ ಅದನ್ನು ನೋಡಲು ಕೆಳಗಿಳಿದು ಬಂದ.



**9** ಹೀಗೆ ರಾಜ ಉಳುತ್ತಿದ್ದಾಗ ಅವನ ಮುಂದೆ ಶಿವ ಕಾಣಿಸಿಕೊಂಡ.





**10**




ಹೀಗೆ ಹೇಳಿದ ಶಿವ ಕಣ್ಮರೆಯಾದ.

**11** ಅದರಿಂದೇನೂ ವ್ಯಥೆಗೊಳಗಾಗದೆ ರಾಜ ‘ಓಂ ನಮಃ ಶಿವಾಯ’, ‘ಓಂ ನಮೋ ನಾರಾಯಣಾಯ’ ಎಂದು ಸ್ತುತಿಸುತ್ತ ಉಳುವುದನ್ನು ಮುಂದುವರೆಸಿದ. ಆಗ ಮಹಾವಿಷ್ಣು ಅಲ್ಲಿ ಪ್ರತ್ಯಕ್ಷನಾದ.




**12**

